# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 720 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | | 22.07.2024 |
| ಉತ್ತರಿಸುವ ಸಚಿವರು | | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |
| ಕ್ರ. ಸಂ | ಪ್ರಶ್ನೆ | ಉತ್ತರ |
| ಅ | ರಾಜ್ಯದಲ್ಲಿರುವ ಒಟ್ಟು ಖಾಸಗಿ ಹಾಗೂ ಸರ್ಕಾರಿ ಬ್ಲಡ್ ಬ್ಯಾಂಕ್ ಕೇಂದ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 262 ರಕ್ತಕೇಂದ್ರಗಳಿವೆ, 43 ಸರ್ಕಾರಿ ರಕ್ತಕೇಂದ್ರಗಳು 219 ಖಾಸಗಿ ರಕ್ತಕೇಂದ್ರಗಳ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ | ರಾಜ್ಯದ ಬಹುತೇಕ ಆಸ್ಪತ್ರೆಗಳಲ್ಲಿ ರಕ್ತದ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರಕ್ತದ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮವೇನು; | ರಾಜ್ಯದಲ್ಲಿ 262 ರಕ್ತ ಕೇಂದ್ರಗಳು, 179 ರಕ್ತ ಶೇಖರಣಾ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಅಗತ್ಯವಿರುವ ರಕ್ತವನ್ನು ಸ್ವಯಂಪ್ರೇರಿತ ರಕ್ತದಾನ ಹಾಗೂ ರಕ್ತದಾನ ಶಿಬಿರಗಳ ಮೂಲಕ ಸಂಗ್ರಹಿಸಲಾಗುತ್ತಿದೆ. ರಕ್ತದ ಕೊರತೆ ಇರುವ ಪ್ರಕರಣಗಳು ವರದಿಯಾಗಿರುವುದಿಲ್ಲ.<br><br>ವಿಶ್ವ ಆರೋಗ್ಯ ಸಂಸ್ಥೆ/ರಾಷ್ಟ್ರೀಯ ರಕ್ತಚಾಲನಾ ಪರಿಷತ್‌ನ ನಿಯಮಾವಳಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 1ರಷ್ಟು ರಕ್ತದ ಅವಶ್ಯಕತೆಯಿರುತ್ತದೆ. 3 ವರ್ಷಗಳ ಗುರಿ ಹಾಗೂ ಸಂಗ್ರಹಣೆ ಈ ಕೆಳಕಂಡಂತಿದೆ. |

| ಆರ್ಥಿಕ ಸಾಲು | ಗುರಿ | ಸಂಗ್ರಹಣೆ | ಶೇಕಡ |
|---|---|---|---|
| 2022-23 | 808529 | 976524 | 121 |
| 2023-24 | 815402 | 974689 | 120 |
| 2024-25 (ಜೂನ್ 24ರ ಅಂತ್ಯಕ್ಕೆ) | 203850 | 241672 | 119 |

ಮುಂದುವರೆದು ರಕ್ತದ ಕೊರತೆಯನ್ನು ನೀಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದೆ.

- ವಿವಿಧ ಸಂಘಸಂಸ್ಥೆಗಳು, ಕಾಲೇಜುಗಳು

| | | |
|---|---|---|
| | | (ಎನ್.ಸಿ.ಸಿ. ಎನ್.ಎಸ್.ಎಸ್) ಕಾರ್ಪೊರೇಟ್ ಸಂಸ್ಥೆಗಳ ಸಹಯೋಗದೊಂದಿಗೆ ರಕ್ತದಾನ ಶಿಬಿರಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.<br>• ರೈಲುನಿಲ್ದಾಣ, ಬಸ್ಸು ತಂಗುದಾಣಗಳಲ್ಲಿ ಸ್ಟ್ಯಾಂಡೀಸ್, ಭಿತ್ತಿಪತ್ರ, ಡಿಜಿಟಲ್ ಡಿಸ್ಪ್ಲೇ, ವಿಡಿಯೋ ಮತ್ತು ಆಡಿಯೋ ಕ್ಲಿಪ್‌ಗಳ ಮೂಲಕ ರಕ್ತದಾನದ ಅರಿವನ್ನು ಸಾರ್ವಜನಿಕರಿಗೆ ಮೂಡಿಸಲಾಗುತ್ತದೆ.<br>• ವಿಶ್ವ ಯುವದಿನ, ವಿಶ್ವ ರಕ್ತದಾನಿಗಳ ದಿನ, ರಾಷ್ಟ್ರೀಯ ರಕ್ತದಾನ ದಿನಾಚರಣೆ, ಸಂದರ್ಭಗಳಲ್ಲಿ ರಾಜ್ಯದಲ್ಲಿ ಅತಿ ಹೆಚ್ಚು ರಕ್ತ ಸಂಗ್ರಹಿಸುವ ಮತ್ತು ರಕ್ತದಾನ ಶಿಬಿರಗಳನ್ನು ಏರ್ಪಡಿಸುವ ಸರ್ಕಾರಿ ರಕ್ತಕೇಂದ್ರ, ಖಾಸಗಿರಕ್ತ ಕೇಂದ್ರ, ಖಾಸಗಿ ಸಂಘ ಸಂಸ್ಥೆ ಮತ್ತು ಅತಿ ಹೆಚ್ಚು ರಕ್ತದಾನ ಮಾಡುವ ದಾನಿಗಳನ್ನು ರಾಷ್ಟ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಗೌರವಿಸಿ ಸನ್ಮಾನಿಸುವ ಮುಖಾಂತರ ನಿಯಮಿತವಾಗಿ ರಕ್ತದಾನ ಮಾಡುವಂತೆ ಹಾಗೂ ಇತರರನ್ನು ರಕ್ತದಾನ ಮಾಡುವಂತೆ ಪ್ರೇರೇಪಿಸುವ ಮತ್ತು ಪ್ರೋತ್ಸಾಹಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br>• ರಕ್ತದಾನ ಮತ್ತು ರಕ್ತದಾನ ಶಿಬಿರಗಳನ್ನು ಆಯೋಜಿಸಲು ರಾಜ್ಯದಲ್ಲಿರುವ 39 ಸರ್ಕಾರಿ ರಕ್ತ ಕೇಂದ್ರಗಳು ಮತ್ತು ಅತಿ ಹೆಚ್ಚು ರಕ್ತ ಸಂಗ್ರಹಿಸುವ 27 ಖಾಸಗಿ ರಕ್ತ ಕೇಂದ್ರಗಳಿಗೆ ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ರಕ್ತದ ಯುನಿಟ್‌ಗೆ ರೂ.25/- ಲಘು ಉಪಹಾರಕ್ಕಾಗಿ ಮತ್ತು ಪ್ರತಿ ರಕ್ತದಾನ ಶಿಬಿರಕ್ಕೆ (75 ರಕ್ತದ ಯುನಿಟ್‌ಗಳನ್ನು ಒಂದು ರಕ್ತದಾನ ಶಿಬಿರವೆಂದು ಪರಿಗಣಿಸಿ) ರೂ. 2500/-ಗಳ ಪ್ರೋತ್ಸಾಹ ಧನ ನೀಡಲಾಗುತ್ತಿದೆ. |
| ಇ | ಒಬ್ಬ ರಕ್ತದಾನಿಯಿಂದ ಸಂಗ್ರಹಿಸಬಹುದಾದ ಕನಿಷ್ಠ ಹಾಗೂ ಗರಿಷ್ಠ ಪ್ರಮಾಣದ ರಕ್ತ ಎಷ್ಟು; ಇವುಗಳಿಗೆ ಇಲಾಖೆಯ ಮಾನದಂಡವನ್ನು ನಿಗದಿಪಡಿಸಿದೆಯೇ; | 18ರಿಂದ 65ವರ್ಷದೊಳಗಿನ ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿ, ಕನಿಷ್ಠ 45 ಕೆ.ಜಿ ದೇಹದ ತೂಕವಿರುವ ಮತ್ತು ರಕ್ತದಲ್ಲಿ ಹಿಮೊಗ್ಲೋಬಿನ್‌ನ ಪ್ರಮಾಣ ಕನಿಷ್ಟ 12.5% ಇರುವ ವ್ಯಕ್ತಿ ವರ್ಷಕ್ಕೆ ಪುರುಷರು 4 ಬಾರಿ ಮತ್ತು ಮಹಿಳೆಯರು 3 ಬಾರಿ ರಕ್ತದಾನ ಮಾಡಬಹುದಾಗಿದೆ. 45 ರಿಂದ 55 ಕೆ.ಜಿ ದೇಹದ ತೂಕ ಹೊಂದಿರುವ ವ್ಯಕ್ತಿಯು 350ಮಿ.ಲೀ. ರಕ್ತವನ್ನು ಮತ್ತು 55ಕೆ.ಜಿಗಿಂತ ಹೆಚ್ಚು ದೇಹದ |

| | | |
|---|---|---|
| | | ತೂಕವನ್ನು ಹೊಂದಿರುವ ವ್ಯಕ್ತಿಯು 450ಮಿ.ಲೀ. ರಕ್ತವನ್ನು ದಾನಮಾಡಬಹುದು. |
| ಈ | ಪ್ರಸ್ತುತ ರಾಜ್ಯದಲ್ಲಿ ಯಾವ ಯಾವ ಸರ್ಕಾರಿ ಬ್ಲಡ್ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಪ್ರಮಾಣ ರಕ್ತವು ಸಂಗ್ರಹವಿದೆ: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಸರ್ಕಾರಿ ರಕ್ತ ಕೇಂದ್ರಗಳಲ್ಲಿ ಲಭ್ಯವಿರುವ ರಕ್ತ ಸಂಗ್ರಹಣೆಗಳ ಮಾಹಿತಿಯ ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಉ | ತುರ್ತು ಸಂದರ್ಭದಲ್ಲಿ ಸಾರ್ವಜನಿಕರಿಗೆ ರಕ್ತ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು: ರಾಜ್ಯದ ಯಾವ ಯಾವ ಜಿಲ್ಲೆಗಳ ಬ್ಲಡ್ ಬ್ಯಾಂಕ್‌ಗಳ (ರಕ್ತನಿಧಿಕೇಂದ್ರ)ಲ್ಲಿ ರಕ್ತದ ಸಂಗ್ರಹವಿದೆ ಎಂಬುದನ್ನು ಪ್ರತಿ ದಿನ ಸಾರ್ವಜನಿಕರಿಗೆ ತಿಳಿಸಲು ಆರೋಗ್ಯ ಇಲಾಖೆಯಿಂದ ಒಂದು ಪೋರ್ಟಲ್‌ನ್ನು ತೆರೆದು ಅದರಲ್ಲಿ ಮಾಹಿತಿಯನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬಹುದಲ್ಲವೇ? (ಸ್ಪಷ್ಟ ಮಾಹಿತಿಯೊಂದಿಗೆ ವಿವರವನ್ನು ನೀಡುವುದು) | ತುರ್ತು ಸಂದರ್ಭದಲ್ಲಿ ಸಾರ್ವಜನಿಕರಿಗೆ ರಕ್ತ ಸಿಗುವಂತೆ ಮಾಡಲು ರಾಷ್ಟ್ರೀಯ ರಕ್ತ ಚಾಲನಾ ಪರಿಷತ್, ಕೇಂದ್ರ ಸರ್ಕಾರ, ನವದೆಹಲಿಯು e-Raktkosh ಎಂಬ ತಂತ್ರಾಂಶವನ್ನು **One Nation** One Platform ಎಂಬ ಅಭಿಯಾನದಡಿಯಲ್ಲಿ ಅಭಿವೃದ್ಧಿಪಡಿಸಿದೆ.<br><br>ಇದು ಸಾರ್ವಜನಿಕರಿಗೆ ರಕ್ತ ಮತ್ತು ರಕ್ತದ ಅಂಗಾಂಶಗಳ ವಿವರವನ್ನು ಸುಲಭವಾಗಿ ಲಭ್ಯವಾಗುವಂತೆ ಅಭಿವೃದ್ಧಿಪಡಿಸಲಾದ ತಂತ್ರಾಂಶವಾಗಿದೆ. ಸದರಿ ತಂತ್ರಾಂಶದಲ್ಲಿ ರಕ್ತಕೇಂದ್ರದ ಹೆಸರು, ವಿಳಾಸ, ಕ್ರಮಿಸುವ ದೂರದ ಅಂತರ, ದೂರವಾಣಿ, ಲಭ್ಯವಿರುವ ರಕ್ತದ ಮಾದರಿ, ಅದರ ಅಂಗಾಂಶಗಳು, ಎಲ್ಲವೂ ದೊರೆಯಲಿದೆ. ರಾಜ್ಯವಾರು, ಜಿಲ್ಲಾವಾರು ಮಾಹಿತಿ ದೊರೆಯಲಿದೆ. |

**ಆಕುಕ 66 ಎಸ್‌ಬಿವಿ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

ಅನುಬಂಧ -1

| Sl.No. | Name of the District | Total Functioning Blood Centre | Type of Blood Center | |
|---|---|---|---|---|
| | | | Govt | Private |
| 1 | Bagalkot | 10 | 1 | 9 |
| 2 | Bangalore Rural | 3 | 0 | 3 |
| 3 | Bangalore Urban | 46 | 13 | 68 |
| 4 | BBMP | 35 | | |
| 5 | Belagavi | 14 | 1 | 13 |
| 6 | Bellary | 6 | 1 | 5 |
| 7 | Bidar | 2 | 1 | 1 |
| 8 | Bijapur | 10 | 1 | 9 |
| 9 | Chamarajanagar | 2 | 1 | 1 |
| 10 | Chikkaballapur | 1 | 0 | 1 |
| 11 | Chikmagalur | 4 | 1 | 3 |
| 12 | Chitradurga | 4 | 1 | 3 |
| 13 | Dakshina Kannada | 15 | 1 | 14 |
| 14 | Davanagere | 9 | 1 | 8 |
| 15 | Dharwad | 12 | 2 | 10 |
| 16 | Gadag | 4 | 1 | 3 |
| 17 | Gulbarga | 11 | 1 | 10 |
| 18 | Hassan | 5 | 1 | 4 |
| 19 | Haveri | 3 | 1 | 2 |
| 20 | Kodagu | 1 | 1 | 0 |
| 21 | Kolar | 6 | 2 | 4 |
| 22 | Koppal | 4 | 0 | 4 |
| 23 | Mandya | 3 | 1 | 2 |
| 24 | Mysore | 12 | 2 | 10 |
| 25 | Raichur | 8 | 2 | 6 |
| 26 | Ramanagara | 4 | 0 | 4 |
| 27 | Shimoga | 10 | 2 | 8 |
| 28 | Tumkur | 9 | 1 | 8 |
| 29 | Udupi | 3 | 1 | 2 |
| 30 | Uttara Kannada | 4 | 2 | 2 |
| 31 | Yadgir | 2 | 0 | 2 |
| | **Total** | **262** | 43 | 219 |

Director
KSBTC, Bangalore.

ಅನುಬಂಧ -2

| Sl. No | Name of the District | Name of the Blood Bank | Available Blood and Blood Component as on 17-7-2024 |
|---|---|---|---|
| 1 | Bagalkot | NACO-DISTRICT HOSPITAL BAGALKOT (SDLBB2902000419590 ) | 571 |
| 2 | Bangalore Urban | SIR C.V.RAMAN GENERAL HOSPIAL (SDLBB2920000025924 ) | 876 |
| 3 | Bangalore Urban | NACO-BOWRING AND LADY CURZON (SDLBB2920000303465 ) | 634 |
| 4 | Bangalore Urban | NACO-COMMAND HOSPITAL (AIRFORCE) (SDLBB2920000318434 ) | 636 |
| 5 | Bangalore Urban | NACO-HAJI SIR ISMAIL SAIT GOSHA B.B. (SDLBB2920000301962 ) | 27 |
| 6 | Bangalore Urban | NACO-K.C. GENERAL HOSPITAL (SDLBB2920000322668 ) | 653 |
| 7 | Bangalore Urban | NACO-SRI JAYADEVA INSTITUTE OF CARDIOLOGY (SDLBB2920000325915 ) | 558 |
| 8 | Bangalore Urban | NACO-E.S.I. RAJAJINAGAR B.B. (SDLBB2920000325916 ) | 431 |
| 9 | Bangalore Urban | NACO-I.G.I.OF C. H. BANGALORE (SDLBB2920000305331 ) | 390 |
| 10 | Bangalore Urban | NACO-KIDWAI M.I.OF ONCOLOGY (SDLBB2920000325595 ) | 656 |
| 11 | Bangalore Urban | NACO-NIMAHNS BLOOD BANK (SDLBB2920000311660 ) | 1002 |
| 12 | Bangalore Urban | NACO-S.GANDHI ACCIDENT HOSPITAL & R.I. (SDLBB2920000311711 ) | 613 |
| 13 | Bangalore Urban | NACO-VICTORIA HOSPITAL (SDLBB2920000320929 ) | 400 |
| 14 | Bangalore Urban | HAL HOSPITAL BLOOD BANK (SDLBB2920000311936 ) | 10 |
| 15 | Belgaum | NACO-DISTRICT HOSPITAL BLOOD BANK (SDLBB2901000208932 ) | 243 |
| 16 | Bellary | NACO-VIMS HOSPITAL BLOOD BANK (SDLBB2912000508285 ) | 1271 |
| 17 | Bidar | NACO-DISTRICT HOSPITAL BLOOD BANK BIDAR (SDLBB2905000302040 ) | 403 |
| 18 | Bijapur | NACO-DISTRICT HOSPITAL (SDLBB2903000407535 ) | 491 |
| 19 | Chamarajanagar | NACO-DISTRICT HOSPITAL CHAMARAJANAGAR (SDLBB2927000215529 ) | 1248 |
| 20 | Chikkamagaluru | NACO-MALLEGOWDA DISTRICT HOSPITAL BLOOD BANK (SDLBB2917000608343 ) | 170 |
| 21 | Chitradurga | NACO-DISTRICT HOSPITAL BLOOD BANK (SDLBB2913000218279 ) | 571 |
| 22 | Dakshina Kannada | NACO-DISTRICT WENLOK HOSPITAL (SDLBB2924000217680 ) | 2296 |
| 23 | Davanagere | NACO-CHIGATERI DISTRICT HOSPITAL BLOOD BANK (SDLBB2914000617336 ) | 1008 |

| Sl. No | Name of the District | Name of the Blood Bank | Available Blood and Blood Component as on 17-7-2024 |
|---|---|---|---|
| 24 | Dharwad | NACO KIMS HOSPITAL BB (SDLBB2909000111748 ) | 1044 |
| 25 | Dharwad | NACO-DISTRICT HOSPITAL B.B. (SDLBB2909000117681 ) | 212 |
| 26 | Gadag | NACO-GADAG INSTITUTE OF MEDICAL SCIENCE & DISTRICT HOSPITAL (SDLBB2908000325603 ) | 277 |
| 27 | Gulbarga | NACO-DISTRICT HOSPITAL GULBARGA (SDLBB2904000200772 ) | 794 |
| 28 | Hassan | NACO-SRI CHAMARAJENDRA DISTRICT HOSPITAL BLOOD BANK (SDLBB2923000517667 ) | 744 |
| 29 | Haveri | NACO-DISTRICT HOSPITAL, HAVERI (SDLBB2911000505329 ) | 1074 |
| 30 | Kodagu | NACO-DISTRICT HOSPITAL KODAGU (SDLBB2925000011751 ) | 415 |
| 31 | Kolar | NACO-GENERAL HOSPITAL, KGF (SDLBB2919000411750 ) | 91 |
| 32 | Kolar | NACO-S.N.R. DISTRICT HOSPITAL (SDLBB2919000417669 ) | 340 |
| 33 | Mandya | NACO-DISTRICT HOSPITAL MANDYA (SDLBB2922000117674 ) | 1880 |
| 34 | Mysore | NACO K R HOSPITAL BLOOD BANK (SDLBB2926000100001 ) | 1816 |
| 35 | Mysore | SRI JAYADEVA INSTITUTE OF CARDIOVASCULAR SCIENCES AND RESEARCH(MYSORE) BLOOD BANK (SDLBB2926000400013 ) | 300 |
| 36 | Raichur | NACO-DISTRICT HOSPITAL(RIMS-TEACHING HOSPITAL) (SDLBB2906000217675 ) | 772 |
| 37 | Raichur | HUTTI GOLD MINES HOSPITAL BLOOD BANK (SDLBB2906000211552 ) | 1 |
| 38 | Shimoga | NACO-DISTRICT HOSPITAL- SHIVAMOGA (SDLBB2915000717676 ) | 1758 |
| 39 | Shimoga | V.I.S.L. HOSPITAL (SDLBB2915000713324 ) | 0 |
| 40 | Tumkur | NACO-DISTRICT HOSPITAL BB (SDLBB2918000117678 ) | 359 |
| 41 | Udupi | NACO-DISTRICT HOSPITAL UDUPI (SDLBB2916000317684 ) | 1807 |
| 42 | Uttara Kannada | NACO-DISTRICT HOSPITAL BLOOD BANK KARWAR (SDLBB2910000712022 ) | 229 |
| 43 | Uttara Kannada | NACO-PANDIT GENERAL HOSPITAL, SIRSI (SDLBB2910000718987 ) | 613 |
| | | **Total** | **29684** |

Director
KSBTC, Bangalore.